

ಅವರು ಹಣದ ಮುಗ್ಗಟ್ಟಿನಲ್ಲಿರಬಹುದು ಎಂದರು.

ನಾನು ಉಪಹಾರ ಮುಗಿಸಿ ಸ್ವಲ್ಪ ದುಡ್ಡನ್ನು ಜೊತೆಗೆ ತೆಗೆದುಕೊಂಡು ಲ್ಯಾಂಬೆತ್‌ಗೆ ನಡೆದೆ. ನಾನು ಹೋಗಿ ಬಾಗಿಲನ್ನು ಬಡಿದ ಕೂಡಲೇ ಮ್ಯಾಗಿ ಬಾಗಿಲು ತೆಗೆದಳು. ಅವಳು ತುಂಬಾ ತೆಳ್ಳಗಾಗಿದ್ದಳು. ಅವಳ ಕಣ್ಣುಗಳು ಗುಳಿ ಬಿದ್ದಿದ್ದವು. 'ಓ ಧನ್ಯವಾದ ಗುಪ್ತಾ ಅವರೆ', ಅವಳು ನನ್ನನ್ನು ನೋಡಿ ಆಶ್ಚರ್ಯದಿಂದ 'ನೀವು ತುಂಬಾ ದಯಾಳುಗಳು' ಎಂದು ಉದ್ಗರಿಸಿದಳು.

'ನಿಮ್ಮ ತಾಯಿ ಹೇಗಿದ್ದಾರೆ ಮ್ಯಾಗಿ?' ಎಂದು ಕೇಳಿದೆ. 'ಆಕೆ ಈಗ ಮಲಗಿದ್ದಾಳೆ. ಆಕೆಯ ಪರಿಸ್ಥಿತಿ ತುಂಬಾ ಸೂಕ್ಷ್ಮವಾಗಿದೆ. ಅವಳು ಫ್ರಾಂಕ್‌ನ ಬಗ್ಗೆ ಚಿಂತಿತಳಾಗಿದ್ದಾಳೆ ಎಂದು ಡಾಕ್ಟರ್ ಹೇಳಿದರು. ಅವನಿಂದ ಇನ್ನೂ ಯಾವುದೇ ಸಮಾಚಾರ ಬಂದಿಲ್ಲ. ಆಕೆ ಉಳಿಯಲಿಕ್ಕಿಲ್ಲ' ಎಂದಳು.

ನಾನು ಮ್ಯಾಗಿಯ ಕಣ್ಣೀರನ್ನು ಕರ್ಚೀಫಿನಿಂದ ಒರೆಸುತ್ತಾ ಮ್ಯಾಗಿಗೆ ಧೈರ್ಯ ಹೇಳಲು ಪ್ರಯತ್ನಿಸಿದೆ. ಮ್ಯಾಗಿ ಸ್ವಲ್ಪ ಸುಧಾರಿಸಿಕೊಂಡು ಹೇಳಿದಳು, 'ಮಿ. ಗುಪ್ತಾ ನಾನು ನಿಮ್ಮಲ್ಲಿ ಒಂದು ವಿನಂತಿ ಮಾಡುತ್ತಿದ್ದೇನೆ.'

'ಏನದು ಮ್ಯಾಗಿ.'

'ಬೈಠಕ್ ಖಾನೆಗೆ ಬನ್ನಿ ನಾನು ಹೇಳುತ್ತೇನೆ' ಎಂದಳು. ನಮ್ಮ ಹೆಜ್ಜೆಯ ಸದ್ದಿನಿಂದ ರೋಗಿಗೆ ತೊಂದರೆಯಾಗದಂತೆ ಮೆಲು ನಡಿಗೆಯಲ್ಲಿ ಕೂಡುವ ಕೋಣೆಗೆ ಬಂದೆವು. ನಾನು ಕೋಣೆಯ ಮಧ್ಯಕ್ಕೆ ಬಂದು 'ಏನು ಮ್ಯಾಗಿ' ಎಂದು ಪುನಃ ಕೇಳಿದೆ. ಮ್ಯಾಗಿ ತನ್ನ ಆರ್ದ್ರ ಕಣ್ಣುಗಳಿಂದ ನನ್ನತ್ತ ಆಶಾದಾಯಕ ದೃಷ್ಟಿ ಬೀರಿದಳು. ಆಕೆ ತನ್ನ ಕೈಗಳಿಂದ ಮುಖ ಮುಚ್ಚಿಕೊಂಡು ಮೌನವಾಗಿ ಅತ್ತಳು.

ಉತ್ತರಿಸಲು ನನಗೆ ಸಂದಿಗ್ಧವಾಯಿತು. ಈ ಮಗುವನ್ನು ಸಮಾಧಾನಪಡಿಸಲು ಏನು ಹೇಳಲಿ? ಆಕೆಯ ಅಣ್ಣ ರಣಾಂಗಣದಲ್ಲಿ ಯುದ್ಧ ನಿರತನಾಗಿದ್ದಾನೆ. ಭೂಮಿಯ ಮೇಲೆ ಅವನು ಜೀವಂತ ಇದ್ದಾನೋ ಇಲ್ಲವೋ ಎಂಬುದನ್ನು ದೇವರೊಬ್ಬನೇ ಬಲ್ಲ. ಆಕೆಯ ತಾಯಿಗೆ ಅವನೊಬ್ಬನೇ ಮಗ, ಆಕೆಯು ತಾಯಿಯನ್ನು ಕಳೆದುಕೊಂಡರೆ ಏನಾಗಬಹುದು? ಹದಿ ಹರೆಯದವಳಾಗುವ ಹೊಸ್ತಿಲಲ್ಲಿರುವ ಈ ಹುಡುಗಿ ಲಂಡನ್ನಿನಲ್ಲಿ ಎಲ್ಲಿ ಹೋಗಬೇಕು?

ಅವಳ ಮುಖದ ಮೇಲಿನ ಕೈಗಳನ್ನು ಸರಿಸಿ, 'ಮ್ಯಾಗಿ ನನ್ನಿಂದ ಏನಾಗಬೇಕೆಂದು ಎಂದುಕೊಂಡಿರುವೆ. ನಿನಗೆ